(21)

ಗುಣಾತ್ಮಕ ಶಿಕ್ಷಣಕ್ಕಾಗಿ ಕ್ರಿಯಾಶೀಲ ಆಡಳಿತ

J.A. Lower Primary English Medium School ATHANI

# ಉಪನಿರ್ದೇಶಕರ ಕಾರ್ಯಾಲಯ, ಸಾರ್ವಜನಿಕ ಶಿಕ್ಷಣ ಇಲಾಖೆ,
# ಚಿಕ್ಕೋಡಿ

ಸಂಖ್ಯೆ:ಅನು2:ಖಾಪ್ರಾಶಾ/ಆಂಗ್ಲ:/ಹೊಸ/ಅಥಣಿ/2016-17 /240 ದಿನಾಂಕ 31-03-2017.

ನಮೂನೆ-2

(ನಿಯಮ 3 ಉಪನಿಯಮ 5 (ಬಿ))

ಜಾಧವಜಿ ಶಿಕ್ಷಣ ಸಂಸ್ಥೆ ಅಥಣಿ ಜಿ:ಬೆಳಗಾವಿ ಈ ಆಡಳಿತ ಮಂಡಳಿಯವರಿಗೆ ಕರ್ನಾಟಕ ಶಿಕ್ಷಣ ಕಾಯ್ದೆ 1983 (ಕರ್ನಾಟಕ ಆ್ಯಕ್ಟ 1-1995) ಸೆಕ್ಷನ್ 30-31 ರಂತೆ ಈ ದಿನ ದಿನಾಂಕ: 31-03-2017 ರಂದು ಈ ಕೆಳಗೆ ಸಮೂದಿಸಿರುವ ಶಿಕ್ಷಣ ಸಂಸ್ಥೆಯನ್ನು ಅಥಣಿ ತಾಲೂಕಿನ ಅಥಣಿ ಪಟ್ಟಣದಲ್ಲಿ ಗ್ರಾಮದಲ್ಲಿ ನಡೆಸಲು ನೋಂದಾಯಿಸಲಾಗಿದೆ ಎಂದು ಪ್ರಮಾಣೀಕರಿಸಲಾಗಿದೆ.

| | | |
|---|---|---|
| 1. | ಕೆ.ಜಿ.ಎಸ್ ಸ್ವೀಕೃತಿ ರಸೀದಿ ಸಂಖ್ಯೆ ಹಾಗೂ ದಿನಾಂಕ:<br>ಆನ್ ಲೈನ್ ಅಪ್ಲೀಕೇಶನ್ ನಂಬರ/ ದಿನಾಂಕ | ಇಡಿ099-00003-48709ದಿನಾಂಕ 23-02-2017<br>301214 ದಿನಾಂಕ 31-01-2017 |
| 2. | ಕ್ರಮ ಸಂಖ್ಯೆ/ಅನುಮತಿ ನೀಡಿದ ವರ್ಷ : | 56/2016-17 |
| 3. | ಪ್ರಾಥಮಿಕ ಶಾಲೆಯ ಹೆಸರು : | ಜೆ ಎ ಸಂಸ್ಥೆಯ ಆಂಗ್ಲ ಮಾಧ್ಯಮ ಕಿರಿಯ ಪ್ರಾಥಮಿಕ ಶಾಲೆ ಅಥಣಿ |
| 4. | ಶಿಕ್ಷಣ ಸಂಸ್ಥೆಯ ವರ್ಗೀಕರಣ : | ಪ್ರಾಥಮಿಕ ಶಿಕ್ಷಣ (ಸಹ ಶಿಕ್ಷಣ) |
| 5. | ಅನುಮತಿ ನೀಡಿದ ತರಗತಿ : | 1 ನೇ ತರಗತಿ : 2017-18 ನೇ ಸಾಲಿನಲ್ಲಿ.<br>2 ನೇ ತರಗತಿ : 2018-19 ನೇ ಸಾಲಿನಲ್ಲಿ.<br>3 ನೇ ತರಗತಿ : 2019-20 ನೇ ಸಾಲಿನಲ್ಲಿ.<br>4 ನೇ ತರಗತಿ : 2020-21 ನೇ ಸಾಲಿನಲ್ಲಿ.<br>5 ನೇ ತರಗತಿ : 2021-22 ನೇ ಸಾಲಿನಲ್ಲಿ. |
| 6. | ಪ್ರಾರಂಭಿಸಬೇಕಾದ ವರ್ಷ : | 2017-18 ನೇ ಸಾಲಿನಿಂದ |
| 7. | ಅನುಮತಿ ನೀಡಿದ ಮಾಧ್ಯಮ : | ಆಂಗ್ಲ ಮಾಧ್ಯಮ |
| 8. | ಶುಲ್ಕ ಪಾವತಿ ಮಾಡಿರುವುದು : | ರೂ. 25,000-00 ಪಾವತಿ ಮಾಡಿರುತ್ತಾರೆ.<br>ಎಸ್ ಬಿ ಐ ಅಥಣಿ<br>ಡಿ ಡಿ ಸಂಖ್ಯೆ: 189839 ದಿನಾಂಕ: 31-01-2017. |

ಸದರಿ ಶಿಕ್ಷಣ ಸಂಸ್ಥೆಯನ್ನು ಕ್ರಮ ಸಂಖ್ಯೆ:: 56: ವ್ಯಾಲ್ಯೂಮು ಸಂಖ್ಯೆ 01 ರ ಪುಟ ಸಂಖ್ಯೆ: 51–52 ರಲ್ಲಿ ಈ ಕಛೇರಿಯಲ್ಲಿನ ಶೈಕ್ಷಣಿಕ ಸಂಸ್ಥೆಗಳ ನೋಂದಣಿ ವಹಿಯಲ್ಲಿ ನೋಂದಾಯಿಸಲಾಗಿದೆ. ಈ ಪ್ರಮಾಣ ಪತ್ರವನ್ನು ಕರ್ನಾಟಕ ಶಿಕ್ಷಣ ಮಸೂದೆ 1983 ರಡಿ ಈ ಕೆಳಕಂಡ ಷರತ್ತಿಗೊಳಪಟ್ಟು ನೀಡಲಾಗಿದೆ.

1. ಕರ್ನಾಟಕ ಖಾಸಗಿ ಶಿಕ್ಷಣ ಸಂಸ್ಥೆಗಳ (ವರ್ಗೀಕರಣ ಹಾಗೂ ನೋಂದಣಿ) ನಿಯಮಗಳು, 1997 ರ ನಿಯಮ 3, 4 ಮತ್ತು 5 ಕ್ಕೆ ಒಳಪಟ್ಟಿರುತ್ತದೆ.
2. ಸರ್ಕಾರದ ಆದೇಶ ಸಂಖ್ಯೆ: ಇಡಿ 91 ಮಾಹಿತಿ 2012 ದಿನಾಂಕ: 15–11–2012 ರಂತೆ ಈ ನೋಂದಣಿಯು ಕರ್ನಾಟಕ ಮಕ್ಕಳ ಉಚಿತ ಮತ್ತು ಕಡ್ಡಾಯ ಶಿಕ್ಷಣ ನಿಯಮಗಳು 2012 ಹಾಗೂ ಸದರಿ ಆದೇಶದಡಿಯಲ್ಲಿ ಕಾಲಕಾಲಕ್ಕೆ ಶಾಲಾ ಶಿಕ್ಷಣ ಪದ್ಧತಿಯ ಬದಲಾವಣೆ ಕುರಿತು ರೂಪಿಸಲಾಗುವ ನಿಯಮಗಳನ್ನು ಪಾಲನೆ ಮಾಡುವ ಷರತ್ತಿಗೆ ಒಳಪಟ್ಟಿರುತ್ತದೆ.
3. ಸಂಸ್ಥೆಯ ಆಡಳಿತ ಮಂಡಳಿಯು ಮೇಲೆ ತಿಳಿಸಿರುವ ನಿಯಮಗಳಂತೆ ಎಲ್ಲಾ ಷರತ್ತುಗಳನ್ನು ಕಡ್ಡಾಯವಾಗಿ ಪಾಲಿಸಬೇಕು.
4. ಶಾಲಾ ನಿವೇಶನ, ವಿಸ್ತೀರ್ಣ, ಕಟ್ಟಡ, ಪಾಠ, ಪೀಠೋಪಕರಣಗಳು, ಸಿಬ್ಬಂದಿ ವರ್ಗ ಆರ್ಥಿಕ ಅನುಕೂಲತೆಗಳು ಮುಂತಾದವುಗಳನ್ನು ಒದಗಿಸುವ ಷರತ್ತಿಗೆ ಒಳಪಟ್ಟಿರುತ್ತದೆ.
5. ಸದರಿ ಶಿಕ್ಷಣ ಸಂಸ್ಥೆಯು ಯಾವುದೇ ಸಂದರ್ಭದಲ್ಲಿಯೂ ಸರ್ಕಾರದ ಪೂರ್ವಾನುಮತಿ ಇಲ್ಲದೆ ಹೆಚ್ಚಿನ ವಿಭಾಗಗಳನ್ನು ತೆರೆಯುವಂತಿಲ್ಲ.
6. ಶಾಲೆಯನ್ನು ಮಂಜೂರು ಮಾಡಿರುವ ಮಾಧ್ಯಮದಲ್ಲಿ ಮತ್ತು ಅದೇ ಸ್ಥಳದಲ್ಲಿ, ಅದೇ ಸರ್ವೇ ನಂಬರ್‌ನಲ್ಲಿ ಮಾತ್ರ ತೆರೆಯತಕ್ಕದ್ದು ಹಾಗೂ ಯಾವುದೇ ಕಾರಣಕ್ಕೂ ಸ್ಥಳ ಬದಲಾವಣೆ ಮಾಡಲು ಅವಕಾಶವಿರುವುದಿಲ್ಲ.
6. ಯಾವ ಆಡಳಿತ ಮಂಡಳಿಗೆ ಶಾಲೆ ನಡೆಸಲು ಅನುಮತಿ ನೀಡಲಾಗಿದೆಯೋ ಅದೇ ಮಂಡಳಿಯು ಅದೇ ಸ್ಥಳದಲ್ಲಿಯೇ ಮತ್ತು ಅದೇ ಹೆಸರಿನಲ್ಲಿ ನಡೆಸತಕ್ಕದ್ದು.
7. ಈ ಶಿಕ್ಷಣ ಸಂಸ್ಥೆಯವರು ಶಿಕ್ಷಣ ಸಂಸ್ಥೆಗಳಿಗೆ ಸಂಬಂಧಿಸಿದಂತೆ ಜಾರಿಯಲ್ಲಿರುವ ಹಾಗೂ ಆಗಿಂದಾಗ್ಗೆ ಹೊರಡಿಸುವ ಎಲ್ಲ ಸರ್ಕಾರಿ ಆದೇಶಗಳು ಹಾಗೂ ನಿಯಮಗಳನ್ನು ಪಾಲಿಸತಕ್ಕದ್ದು. ಕರ್ನಾಟಕ ಶಿಕ್ಷಣ ಮಸೂದೆ 1983 (ಕರ್ನಾಟಕ ಆ್ಯಕ್ಟ ಸಂಖ್ಯೆ: 1:95) ಇದರಡಿಯಲ್ಲಿ ಬರುವ ಕಾಯ್ದೆಗಳನ್ನು ಮತ್ತು ಅದರಡಿಯಲ್ಲಿ ರಚಿಸಲಾಗಿರುವ ನಿಯಮಗಳನ್ನು ತಪ್ಪದೆ ಪಾಲಿಸತಕ್ಕದ್ದು.
8. ಈ ಪ್ರಾಥಮಿಕ ಶಾಲೆ ನೋಂದಣಿಯಂತೆ ಸರ್ಕಾರಿ ಅಧಿಸೂಚನೆ ಸಂಖ್ಯೆ: ಇಡಿ:175:ಪಿ.ಎಂ.ಸಿ:95, ದಿನಾಂಕ: 7–9–98 ಮತ್ತು ದಿನಾಂಕ: 29–12–98 ರ ಪ್ರಕಾರ **ಶಾಶ್ವತ ಅನುದಾನರಹಿತವಾಗಿರುತ್ತದೆ.**
9. ಆಡಳಿತ ಮಂಡಳಿಯು ಸರ್ಕಾರದಿಂದ ಯಾವುದೇ ಅನುದಾನವನ್ನು ಬಯಸುವುದಿಲ್ಲವೆಂದು ರೂ.20–00 ಛಾಪಾ ಕಾಗದದಲ್ಲಿ ನೋಟರಿಯವರ ಮುಂದೆ ಪ್ರಮಾಣೀಕರಿಸಿದ ಒಪ್ಪಿಗೆ ಪತ್ರವನ್ನು ನೀಡುವುದು.
10. ಇಲಾಖೆ ಹಾಗೂ ಸರ್ಕಾರ ನಿಗದಿ ಪಡಿಸಿದ ಪಠ್ಯಪುಸ್ತಕ, ಪರೀಕ್ಷಾ ಕ್ರಮಗಳನ್ನು ಮಾತ್ರ ತಪ್ಪದೇ ಅಳವಡಿಸತಕ್ಕದ್ದು.
11. ಶಾಲೆಯನ್ನು ಪ್ರಾರಂಭಿಸಲು ಸಂಸ್ಥೆಯವರು ಭದ್ರತಾ ಠೇವಣಿಯನ್ನು ಕ್ಷೇತ್ರ ಶಿಕ್ಷಣಾಧಿಕಾರಿಗಳ ಹಾಗೂ ಆಡಳಿತ ಮಂಡಳಿಯ ಕಾರ್ಯದರ್ಶಿಗಳ ಜಂಟಿ ಖಾತೆಯಲ್ಲಿ ಇಡತಕ್ಕದ್ದು.
12. ಅನುಮತಿ ನೀಡಿದ ಪ್ರತಿಯೊಂದು ತರಗತಿಯಲ್ಲಿ ಮಕ್ಕಳ ಹಾಗೂ ಶಿಕ್ಷಕರ ಅನುಪಾತವನ್ನು ನಿಯಮಾನುಸಾರ ಇರತಕ್ಕದ್ದು. ಪ್ರತಿ ತರಗತಿಯಲ್ಲಿ ದಾಖಲಾತಿ 50 ಹಾಗೂ ಹಾಜರಾತಿ 40 ಇರತಕ್ಕದ್ದು.
13. ಕರ್ನಾಟಕ ಶಿಕ್ಷಣ ಮಸೂದೆ ಅನುಚ್ಛೇದ 8 ರ ಅಡಿಯಲ್ಲಿ ಉಪಬಂಧ 36–39 ರಂತೆ ನೊಂದಾಯಿಸಿದ ಎಲ್ಲ ಶಾಲೆಗಳು ರೆಕಗ್ನೇಷನ್ ಹಾಗೂ ಪ್ರಾವಿಜನಲ್ ರೆಕಗ್ನೇಷನ್ ವ್ಯಾಪ್ತಿಗೆ ಬರುವುದು.
14. ಪ್ರತಿ ವರ್ಷವೂ ವಿದ್ಯಾರ್ಥಿಗಳ ವೈದ್ಯಕೀಯ ಪರೀಕ್ಷೆಯನ್ನು ನಿಯಮಾನುಸಾರ ಮಾಡಿಸತಕ್ಕದ್ದು.
15. ಶಾಲಾ ಕೆಲಸದ ವೇಳೆ ಮತ್ತು ದಿನಗಳನ್ನು ಇಲಾಖೆಯ ನಿಯಮಗಳಂತೆ ಪಾಲಿಸತಕ್ಕದ್ದು.

16. ಶಾಲೆ ತೆರೆದ ಬಗ್ಗೆ ಹಾಗೂ ವಿದ್ಯಾರ್ಥಿಗಳ ದಾಖಲಾತಿಯನ್ನು, ಶಾಲೆ ನೋಂದಣಿಯಾದ ಅಥವಾ ಶೈಕ್ಷಣಿಕ ವರ್ಷ ಪ್ರಾರಂಭವಾದ ಎರಡು ತಿಂಗಳ ಒಳಗಾಗಿ ಸಂಬಂಧಿಸಿದ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಸಲ್ಲಿಸಬೇಕು. ಒಂದು ವೇಳೆ ಶಾಲೆ ತೆರೆಯದಿದ್ದಲ್ಲಿ ಯಾವುದೇ ಷರತ್ತುಗಳನ್ನು ಪಾಲಿಸದಿದ್ದಲ್ಲಿ ಈ ಆದೇಶ ತಾನಾಗಿಯೇ ರದ್ದಾಗುವುದು.

Lower Primary English Medium School
ATHANI

17. ಶಾಲೆಯಲ್ಲಿ ಹೆಣ್ಣು ಮಕ್ಕಳಿಗೆ ಮತ್ತು ಗಂಡು ಮಕ್ಕಳಿಗೆ ಪ್ರತ್ಯೇಕವಾದ ಶೌಚಾಲಯದ ವ್ಯವಸ್ಥೆಯನ್ನು ಕಡ್ಡಾಯವಾಗಿ ಒದಗಿಸಬೇಕು ಮತ್ತು ಕುಡಿಯುವ ನೀರಿನ ವ್ಯವಸ್ಥೆಯನ್ನು ಒದಗಿಸಬೇಕು.

18. ಶಾಲೆಯ ಕಟ್ಟಡ ಸುರಕ್ಷತೆಯ ಬಗ್ಗೆ, ಬೆಂಕಿ, ಬಿರುಗಾಳಿ, ವಿದ್ಯುತ್ ಅಪಘಾತ ಮುಂತಾದ ಅವಘಡಗಳಿಂದ ಸುರಕ್ಷಿತವಾಗಿರತಕ್ಕದ್ದು. ಮತ್ತು ನ್ಯಾಶನಲ್ ಬಿಲ್ಡಿಂಗ್ ಕೋಡ್ ಅಫ್ ಇಂಡಿಯಾ 2005 ರ ಪ್ರಕಾರ ಶಾಲಾ ಕಟ್ಟಡಗಳಲ್ಲಿ ಜಾಗೃತಿ ಕ್ರಮಗಳನ್ನು ತೆಗೆದುಕೊಳ್ಳಬೇಕು.

19. ಶಾಲೆಗಳಲ್ಲಿ ಅಗ್ನಿಶಾಮಕ ಯಂತ್ರ ಅಳವಡಿಸಿ ಎಲ್ಲ ಶಿಕ್ಷಕರಿಗೆ ಮತ್ತು ಇತರ ಸಿಬ್ಬಂದಿಗೆ ಅದರ ಉಪಯೋಗದ ಬಗ್ಗೆ ತರಬೇತಿ ನೀಡುವದು

20. ಸಿಬಂದಿ ಮಾದರಿ ರಚನೆಯ ಪ್ರಕಾರ ಬೋಧಕ / ಬೋಧಕೇತರ ಸಿಬ್ಬಂದಿಗಳನ್ನು ಕರ್ನಾಟಕ ಶಿಕ್ಷಣ ಸಂಸ್ಥೆಗಳು (ಅನುದಾನ ಇಲ್ಲದ ಪ್ರಾಥಮಿಕ ಮತ್ತು ಪ್ರಾಥಮಿಕ ಹಾಗೂ ಪದವಿ ಪೂರ್ವ-ಶಿಕ್ಷಣ ಸಂಸ್ಥೆಗಳ ನೌಕರರ ಕೆಲವು ಸೇವಾ ಷರತ್ತು ಮತ್ತು ನಿಬಂಧನೆಗಳು) ನಿಯಮಗಳು, 2005 ರನ್ವಯ ದೊರಕಿಸಬೇಕಾದ ಎಲ್ಲ ಸೇವಾ ಸೌಲಭ್ಯಗಳನ್ನು ಸಿಬ್ಬಂದಿಗಳಿಗೆ ಲಭ್ಯವಾಗುವಂತೆ ಮಾಡತಕ್ಕದ್ದು.

21. ಸರಕಾರದ ಆದೇಶ ಸಂಖ್ಯೆ: ಇಡಿ 104 ಎಸ್ ಇ ಪಿ 2005 ದಿನಾಂಕ: 12-01-2006 ಹಾಗೂ ಕಾಲಕಾಲಕ್ಕೆ ಹೊರಡಿಸಲಾದ ತಿದ್ದುಪಡಿ ಆದೇಶಗಳ ಪ್ರಕಾರ ಶಾಲಾ ಶಿಕ್ಷಕರಿಗೆ ಸೇವಾ ಭದ್ರತೆ ಒದಗಿಸುವುದು, ಶಿಕ್ಷಕರ ಸೇವಾ ಪುಸ್ತಕ ನಿರ್ವಹಣೆ ಮಾಡುವುದು. ಹಾಗೂ ನೇಮಕ ಮಾಡಿಕೊಂಡ ಶಿಕ್ಷಕರಿಗೆ ಕನಿಷ್ಟ ವೇತನ [ ರೂ 13600/-] ವನ್ನು ಬ್ಯಾಂಕ ಮೂಲಕ ಪಾವತಿಸತಕದ್ದು.

22. ಸರಕಾರದ ಆದೇಶ ಸಂಖ್ಯೆ: ಇಡಿ 104 ಎಸ್ ಇ ಪಿ 2005 ದಿನಾಂಕ:12-01-2006 ರಂತೆ ಸರ್ಕಾರಿ ಶಿಕ್ಷಣ ಸಂಸ್ಥೆಗಳಿಗೆ ನಿಗದಿಪಡಿಸಲಾದ ವಿದ್ಯಾರ್ಹತೆಯಂತೆ, ಅನುದಾನರಹಿತ ಖಾಸಗಿ ಶಿಕ್ಷಣ ಸಂಸ್ಥೆಗಳಲ್ಲಿನ ಹುದ್ದೆಗಳಿಗೂ ಕಡ್ಡಾಯವಾಗಿ ತರಬೇತಿ ಹೊಂದಿದ ಹಾಗೂ ಇಲಾಖೆಯ ನಿಯಮಗಳ ಪ್ರಕಾರ ಅರ್ಹ ವಿದ್ಯಾರ್ಹತೆ ಹೊಂದಿದ ಶಿಕ್ಷಕರನ್ನು ಮಾತ್ರ ನೇಮಕ ಮಾಡತಕ್ಕದ್ದು.

23. ನಿಯಮಾನುಸಾರ ಆಂಗ್ಲ ಮಾಧ್ಯಮದಲ್ಲಿ ಅಧ್ಯಯನ ಮಾಡಿದ ಶಿಕ್ಷಕರನ್ನು ನೇಮಕ ಮಾಡಿಕೊಂಡಿದ್ದಲ್ಲಿ ಮಾತ್ರ ಶಾಲೆಯನ್ನು ಪ್ರಾರಂಭಿಸತಕ್ಕದ್ದು.

24. ಕರ್ನಾಟಕ ಶಿಕ್ಷಣ ಮಸೂದೆ ನಿಯಮಗಳ ಪ್ರಕಾರ ಶಾಲೆಗೆ ಬೇಕಾದ ಪೀಠೋಪಕರಣ, ಪಾಠೋಪಕರಣ, ಗ್ರಂಥಾಲಯ ಪುಸ್ತಕಗಳು ಆಟದ ಮೈದಾನ ಶಾಲಾ ಕಟ್ಟಡ ಮುಂತಾದ ಸೌಲಭ್ಯಗಳನ್ನು ಒಂದು ವರ್ಷದಲ್ಲಿ ಒದಗಿಸಿಕೊಳ್ಳತಕ್ಕದ್ದು. ಇಲ್ಲದಿದ್ದಲ್ಲಿ ನೋಂದಣಿಯನ್ನು ರದ್ದುಗೊಳಿಸಲಾಗುವುದು.

25. ಪ್ರಾರಂಬಿಸಲು ಉದ್ದೇಶಿಸಿರುವ ಶಾಲೆಯು ಬಾಡಿಗೆ ಕಟ್ಟಡ ಹೊಂದಿದ್ದಲ್ಲಿ, ಶಾಲೆ ಪ್ರಾರಂಭಿಸಲು ಉದ್ದೇಶಿಸಿರುವ ಶಾಲಾ ಕಟ್ಟಡ ಹಾಗೂ ಮೂಲಭೂತ ಸೌಕರ್ಯಗಳು ತೃಪ್ತಿಕರವಾಗಿರುವ ಬಗ್ಗೆ ಕ್ಷೇತ್ರ ಶಿಕ್ಷಣಾಧಿಕಾರಿಗಳು ಕಾಲ ಕಾಲಕ್ಕೆ ಪರಿಶೀಲನೆಗೆ ಒಳಪಟ್ಟಿರುತ್ತದೆ.

26. ಆಡಳಿತ ಮಂಡಳಿಯು ಕನಿಷ್ಟ ರೂ, 5 ಲಕ್ಷ ನಗದು ಠೇವಣಿ ಅಥವಾ ಸಮ ಮೊತ್ತದ ಸ್ಥಿರಾಸ್ತಿಯನ್ನು ಶಾಶ್ವತವಾಗಿ ಹೊಂದಿರತಕ್ಕದ್ದು.

27. ಪ್ರತಿ ಶಿಕ್ಷಣ ಸಂಸ್ಥೆ ಪ್ರತಿ ವರ್ಷ ಚಾರ್ಟರ್ಡ ಅಕೌಂಟೆಂಟ್‌ರಿಂದ ಪ್ರಮಾಣೀಕೃತ ಲೆಕ್ಕ ಪತ್ರಗಳನ್ನು ಹೊಂದಿರತಕ್ಕದ್ದು.

28. ಶಾಲೆಯು ವಿದ್ಯಾರ್ಥಿಗಳ ಪ್ರವೇಶಗಳ ನಿಬಂಧನೆಗಳು ಮತ್ತು ವಿದ್ಯಾರ್ಥಿಗಳ ಶುಲ್ಕ ವಸೂಲಾತಿ ಈ ಬಗ್ಗೆ ಇರುವ ನಿಯಮಗಳನ್ನು ಕಡ್ಡಾಯವಾಗಿ ಪಾಲಿಸತಕ್ಕದ್ದು.

29. ಶಾಲೆ ಮತ್ತು ಶಾಲಾ ಆವರಣ, ಶಾಲೆಗಳಲ್ಲಿಯ ಮಕ್ಕಳ ಪ್ರವೇಶ ದಾಖಲಾತಿಗಳು ಎಲ್ಲರಿಗೂ ಮುಕ್ತವಾಗಿರತಕ್ಕದ್ದು.

30. ಶಾಲಾ ಕಟ್ಟಡವು ಪರೀಕ್ಷೆಗಳು, ತರಬೇತಿ, ಜನಗಣತಿ ಇತ್ಯಾದಿ ಇಲಾಖಾ ಕಾರ್ಯಗಳಿಗೆ ಲಭ್ಯವಾಗಿರತಕ್ಕದ್ದು.
31. ಕರ್ನಾಟಕ ಶಿಕ್ಷಣ ಸಂಸ್ಥೆಗಳು [ವರ್ಗೀಕರಣ, ನಿಯಂತ್ರಣ ಮತ್ತು ಪಠ್ಯಕ್ರಮಣ] ನಿಯಮಗಳು 1995 ರಲ್ಲಿ ತಿಳಿಸಿರುವ ಎಲ್ಲಾ ಸೌಲಭ್ಯಗಳನ್ನು ಒದಗಿಸತಕ್ಕದ್ದು.
32. ಈ ಎಲ್ಲಾ ನಿಬಂಧನೆಗಳನ್ನು ಎರಡು ತಿಂಗಳೊಳಗಾಗಿ ಪೂರೈಸಿ ಪ್ರಥಮ ಮಾನ್ಯತೆ ಕುರಿತು ಅರ್ಜಿಯನ್ನು ಸಂಬಂಧಿಸಿದ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಸಲ್ಲಿಸತಕ್ಕದ್ದು.
33. ಆರ್ ಟಿ ಇ ಕಾಯ್ದೆ ಅಡಿಯಲ್ಲಿ 25% ಪ್ರತಿಶತ ವಿದ್ಯಾರ್ಥಿಗಳನ್ನು ಕಡ್ಡಾಯವಾಗಿ ದಾಖಲ ಮಾಡಿಕೊಳ್ಳುವ ಷರತ್ತಿಗೊಳಪಟ್ಟಿರುತ್ತದೆ.
34. ಸಂಬಂಧಪಟ್ಟ ಕ್ಷೇತ್ರ ಶಿಕ್ಷಣಾಧಿಕಾರಿಗಳು ಶಾಲಾ ಆಡಳಿತ ಮಂಡಳಿಯವರು ಆದೇಶದಲ್ಲಿ ಕಾಣಿಸಿದ ಎಲ್ಲ ಷರತ್ತುಗಳನ್ನು ಪೂರೈಸಿರುವುದನ್ನು ಖಚಿತಪಡಿಸಿಕೊಳ್ಳತಕ್ಕದ್ದು.
35. ಮಾನ್ಯ ಕರ್ನಾಟಕ ಉಚ್ಚನ್ಯಾಯಾಲಯ ಧಾರವಾಡ ಇಲ್ಲಿ ದಾಖಲಿಸಿದ ಡಬ್ಲುಪಿನಂ 102786/2017 ತೀರ್ಪು ದಿನಾಂಕ 22–03–2017 ರ ಆದೇಶದ ಪ್ರಕಾರ ಅನುಮತಿ ನೀಡಿದೆ.
36. ಸರ್ಕಾರದ ಆದೇಶ ಸಂಖ್ಯೆ:ಇಡಿ 359 ಪಿಜಿಸಿ 2015 ದಿ:05–09–2015 ರಂತೆ ಸಂಸ್ಥೆಯ ಕಾರ್ಯದರ್ಶಿ ಹಾಗೂ ಉಪನಿರ್ದೇಶಕರವರ/ಕ್ಷೇತ್ರ ಶಿಕ್ಷಣಾಧಿಕಾರಿಗಳ ಜಂಟಿ ಹೆಸರಿನಲ್ಲಿ ನಿಯಮಾನುಸಾರ ನಿಗದಿಪಡಿಸಿದಂತೆ ಸ್ಥಿರನಿಧಿಯನ್ನು ಶಾಲೆ ಪ್ರಾರಂಭಿಸುವುದಕ್ಕಿಂತ ಮುಂಚಿತವಾಗಿ ಇಡತಕ್ಕದ್ದು. ನೋಂದಣಿ ಪ್ರಸ್ತಾವನೆಯೊಡನೆ ಸಲ್ಲಿಸಿದ ದಾಖಲೆಗಳು ಸತ್ಯಕ್ಕೆ ದೂರವಾದದ್ದೆಂದು ಯಾವುದೇ ಸಂದರ್ಭದಲ್ಲಿ ಕಂಡು ಬಂದಲ್ಲಿ ಈ ನೋಂದಣಿ ರದ್ದುಪಡಿಸಲಾಗುವುದು.

(ಜ ಬಿ ಮನ್ನಿಕೇರಿ)
ಉಪನಿರ್ದೇಶಕರು (ಆಡಳಿತ)
ಸಾರ್ವಜನಿಕ ಶಿಕ್ಷಣ ಇಲಾಖೆ,
ಚಿಕ್ಕೋಡಿ

ಸ್ಥಳ : ಚಿಕ್ಕೋಡಿ
ದಿನಾಂಕ : 31–03–2017.

ಗೆ,

1. ಅಧ್ಯಕ್ಷರು/ಕಾರ್ಯದರ್ಶಿಗಳು, ಜಾಧವಜಿ ಶಿಕ್ಷಣ ಸಂಸ್ಥೆ ಅಥಣಿ ಜಿ:ಬೆಳಗಾವಿ
2. ಕ್ಷೇತ್ರ ಶಿಕ್ಷಣಾಧಿಕಾರಿಗಳು, ಅಥಣಿ
3. ಕಛೇರಿ ಪ್ರತಿ.

## Office of the Deputy Director, Department of Public Instruction, Chikodi

No.: Anu2: PPS/Eng:/New/Athani/2016-17/240 Date :31-03-2017.

### Form-2

### (Rule 3, sub-rule 5 (b))

Jadhavji Educational Institution Athani Dist. Belagavi This is to certify that the Board of Directors has registered the educational institution mentioned below to be run in the village of Athani town, Athani taluk, as per Section 30-31 of the Karnataka Education Act 1983 (Karnataka Act 1-1995) on this day: 31-03-2017.

| | | |
|---|---|---|
| 1. | KGS Acknowledgement Receipt Number | ED099-00003-48709 Date : 23-02-2017<br>301214 Date : 31-01-2017 |
| 2. | Sl No./ Authorization issued by | 56/2016-17 |
| 3. | Name of Primary School | J.A. Institution English Medium Lower Primary School, Athani |
| 4. | Classification of educational institution: | Primary Education (Co-education) |
| 5. | Class given permission: | 1st grade: In the 2017-18 academic year.<br>2nd grade: In the 2018-19 academic year.<br>3rd grade: In the 2019-20 school year.<br>4th grade: In the 2020-21 academic year.<br>5th grade: In the 2021-22 academic year. |
| 6. | Year to start | 2017-18 |
| 7. | Permitted media | English medium |
| 8. | Fees paid | Rs. 25,000-00 has been paid.<br>SBI Athani<br>DD No.189839,<br>Date :31-01-2017. |

NOTARY

GOVT.

The said educational institution is registered in the Register of Educational Institutions in this office under Serial No.: 56: Volume No. 01, Page No.: 51-52. This certificate is issued under the Karnataka Education Act, 1983 subject to the following conditions.

1. Subject to rules 3, 4 and 5 of the Karnataka Private Educational Institutions (Classification and Registration) Rules 1997.

2. As per Government Order No.: ED 91 Information 2012 Dated: 15-11-2012, this registration is subject to compliance with the Karnataka Children's Free and Compulsory Education Rules 2012 and the rules framed from time to time under the said order regarding changes in the school education system.

3. The board of directors of the organization must strictly comply with all the conditions as mentioned above.

4. The school site, area, building, lessons, furniture, staff, financial facilities, etc. are subject to the condition of providing.

5. Under no circumstances may the said educational institution open more departments without the prior permission of the government.

6. The school shall be opened only in the approved medium and at the same location, under the same survey number, and no change of location shall be allowed for any reason.

6. The governing body to which permission has been granted to run the school shall run it at the same location and under the same name.

7. This educational institution shall comply with all government orders and rules in force and issued from time to time in relation to educational institutions. The Karnataka Education Bill 1983 (Karnataka Act No.: 1:95) and the rules made thereunder shall be strictly followed.

8. This 'Primary School' is permanently unaided as per Government Notification No.:ED:175:P.M.C:95, `Dated: 7-9-98 and Dated: 29-12-98 as registered.

9. A consent letter certified before a notary on printed paper stating that the management board does not seek any grant from the government. Rs. 20-00:

10. Only the textbooks and examination procedures prescribed by the department and the government should be implemented without fail.

11. The institution shall keep the security deposit in the joint account of the Field Education Officer and Secretary of the Governing Body for starting the school.

12. The ratio of children to teachers in each class given permission shall be as per the rules. The enrollment in each class shall be 50 and the attendance shall be 40.

13. All schools registered under clauses 36-39 under Article 8 of the Karnataka Education Bill will come under the purview of recognition and provisional recognition.

14. Medical examination of students should be conducted every year as per the rules.

15. School work hours and days must be followed as per the departmental rules.

NOTARY GOVT.

16. Regarding the opening of the school and the enrollment of students, the year of school registration: If the school is not opened within two months of its commencement and any conditions are not complied with, this order shall be cancelled.

17. Separate toilet facilities for girls and boys in schools should be provided on a mandatory basis and drinking water facilities should be provided.

18. Regarding the safety of the school building, it should be safe from accidents like fire, storm, electrical accident etc. and awareness measures should be taken in school buildings as per the National Building Code of India. 2005.

19. Install fire extinguishers in schools and train all teachers and other staff on their use.

20. All the service facilities required to be provided to the teaching/non-teaching staff as per the staff model structure shall be made available to the staff under the Karnataka Educational Institutions (Certain Terms and Conditions of Service of Employees of Unaided Primary and Primary and Pre-University Educational Institutions) Rules, 2005.

21. As per Government Order No.: ED 104 SEP 2005 dated: 12-01-2006 and the amended orders issued from time to time, provision of service security to school teachers, maintenance of teachers' service books and payment of minimum salary [Rs. 13600/-] to the appointed teachers through bank.

22. As per Government Order No.: ED 104 SEP 2005 dated: 12-01-2006, only teachers who have undergone mandatory training and who have the appropriate qualifications as per the departmental rules shall be appointed for posts in unaided private educational institutions as per the educational qualifications prescribed for government educational institutions.

23. A school shall be opened only if teachers who have studied in English medium have been appointed as per the rules.

24. As per the rules of the Karnataka Education Bill, the school must provide the necessary facilities like furniture, teaching aids, library books, playground, school building etc. within a year. Otherwise, the registration will be cancelled.

25. If the school proposed to be started has a rented building, the school building and basic facilities proposed to be started will be subject to periodic inspection by the Field Education Officer to ensure that they are satisfactory.

26. The Board of Directors shall permanently hold a minimum cash deposit of Rs. 5 lakhs or an equivalent amount of immovable property.

27. Every educational institution shall have its accounts certified by a chartered accountant every year.

28. The school must strictly comply with the rules regarding student admissions and collection of student fees.

29. School and school premises, admission records of children in schools shall be open to all.

NOTARY

30. The school building shall be available for departmental functions such as examinations, training, census, etc.

31. The Karnataka Educational Institutions [Classification, Regulation and Curriculum] Rules, 1995 shall provide all the facilities specified therein.

32. All these provisions must be fulfilled within two months and the first recognition will be granted. The application should be submitted to the concerned field education officer.

33. Under the RTE Act, there is a mandatory requirement to enroll 25% of students.

34. The concerned Field Education Officers shall ensure that all the conditions stipulated in the order are fulfilled by the school management board.

35. The Hon'ble Karnataka High Court, Dharwad, has granted permission as per the order dated 22-03-2017 in W.P.No. 102786/2017 filed here.

36. As per Government Order No.: ED 359 PGC 2015 dated: 05-09-2015, the fixed fund as prescribed in the rules shall be deposited in the joint name of the Secretary of the institution and the Deputy Director/Field Education Officer before the commencement of the school. In case any documents submitted along with the application for registration are found to be false, the registration shall be cancelled.

Place: Chikkodi
Date : 31-03-2017

Sd/-
(J B Mannikeri)
Deputy (Administration)
Director Public Education Department
Chikkodi

To,
1. President / Secretary, Jadhavaji Educational Institute Athani, Dist. Belagavi.
2. Field Education Officers, Athani
3. Office copy.

NOTARY
GOVT. OF INDIA

Verified & found Correct.
S. V. Ch...
Notary ... of India
ATHANI. Dist: Belagavi.
Mob: 9448194975

SECRETARY
J. E. Society
Athani-591304. Dist:Belagavi.

Head Mistress
Shri Pratap Jadhavji Bhato
English Medium School,
Athani-591304

...ಶ್ರಾಪ್ರ/ಮಾನ/2018-19 ...ಯ ಅಥಣಿ

ದಿನಾಂಕ:05/01/2019

## ಜ್ಞಾಪನ

ವಿಷಯ: ಜೆ ಎ ಶಿಕ್ಷಣ ಸಂಸ್ಥೆಯ ಆಂಗ್ಲ ಮಾಧ್ಯಮ ಕಿರಿಯ ಪ್ರಾಥಮಿಕ ಶಾಲೆ ಅಥಣಿ ತಾ:-ಅಥಣಿ ಈ ಶಾಲೆಗೆ 1 ನೇ ತರಗತಿಗೆ ಮಾನ್ಯತೆ ನವೀಕರಣ ನೀಡುವ ಹಾಗೂ 2 ನೇ ತರಗತಿ ಪ್ರಾರಂಭಿಸಲು ಅನುಮತಿಯನ್ನು ಕುರಿತು.

ಉಲ್ಲೇಖ:1)ಸರ್ಕಾರಿ ಅಧಿಸೂಚನೆ ಸಂಖ್ಯೆ:ಇಡಿ:11:ಎಂಪಿಎಸ್(2) ದಿ:14-09-2004

2)ಅಧ್ಯಕ್ಷರು/ಮುಖ್ಯೋಪಾಧ್ಯಾಯರು ಜೆ ಎ ಶಿಕ್ಷಣ ಸಂಸ್ಥೆಯ ಆಂಗ್ಲ ಮಾಧ್ಯಮ ಕಿರಿಯ ಪ್ರಾಥಮಿಕ ಶಾಲೆ ಅಥಣಿ ತಾ:-ಅಥಣಿ ಇವರ ಪ್ರಸ್ತಾವನೆ ದಿನಾಂಕ: 26/12/2018

3) ಶ್ರೀ ಎಸ್ ಪಿ ಸನದಿ, ಇ.ಸಿ.ಓ, ಶ್ರೀ ಎನ್ ಎಂ ಬಿರಾದಾರ್, ಇ.ಸಿ.ಓ ಹಾಗೂ ಕ್ಷೇತ್ರ ಶಿಕ್ಷಣಾಧಿಕಾರಿಗಳು ಇವರು ದಿ:04/01/2019 ನೀಡಿದ ಸಂದರ್ಶನ ವರದಿ ಮೇರೆಗೆ

4)ಸರಕಾರದ ಸುತ್ತೋಲೆ :ಇಡಿ113:ವಿವಿದಾ:2006 ದಿನಾಂಕ:03/10/2018

5) ಸಕಾಲ ಜಿಎಸ್‌ಸಿ ಸಂಖ್ಯೆ:**ED0990000463637**

ಮೇಲಿನ ವಿಷಯ ಹಾಗೂ ಉಲ್ಲೇಖರನ್ವಯ ರನ್ವಯ ಜೆ ಎ ಶಿಕ್ಷಣ ಸಂಸ್ಥೆಯ ಆಂಗ್ಲ ಮಾಧ್ಯಮ ಕಿರಿಯ ಪ್ರಾಥಮಿಕ ಶಾಲೆ ಅಥಣಿ ತಾ:-ಅಥಣಿ ಇವರಿಗೆ 2018-19 ನೇ ಸಾಲಿಗೆ 1 ನೇ ತರಗತಿಗೆ ಮಾನ್ಯತೆ ನವೀಕರಣ ಹಾಗೂ 2 ನೇ ತರಗತಿ ಪ್ರಾರಂಭಿಸಲು ಅನುಮತಿಯನ್ನು ನೀಡುವ ಕುರಿತು ಪ್ರಸ್ತಾವನೆ ಸಲ್ಲಿಸಿದ್ದಾರೆ. ಸದರಿ ಶಾಲೆಯು ಶಿಕ್ಷಣ ಕಾಯ್ದೆಯಂತೆ ನೋಂದಾಯಿಸಲ್ಪಟ್ಟಿದೆ. ಸದರಿ ಶಾಲೆಯ ಮುಖ್ಯೋಪಾಧ್ಯಾಯರು ಸಲ್ಲಿಸಿದ 1 ನೇ ತರಗತಿಗೆ ಮಾನ್ಯತೆ ನವೀಕರಣ ಹಾಗೂ 2 ನೇ ತರಗತಿ ಪ್ರಾರಂಭಿಸಲು ನೀಡಿದ ಪ್ರಸ್ತಾವನೆಯನ್ನು ಕರ್ನಾಟಕ ಶಿಕ್ಷಣ ಮಸೂದೆಯನ್ವಯ ರಚಿತವಾದ 1999 ರ ಮನ್ನಣೆ ನಿಯಮಗಳನ್ವಯ ಕೂಲಂಕುಷವಾಗಿ ಶ್ರೀ ಎಸ್ ಪಿ ಸನದಿ, ಇ.ಸಿ.ಓ, ಶ್ರೀ ಎನ್ ಎಂ ಬಿರಾದಾರ, ಇ.ಸಿ.ಓ ಹಾಗೂ ಕ್ಷೇತ್ರ ಶಿಕ್ಷಣಾಧಿಕಾರಿಗಳು ಸದರಿ ಶಾಲೆಯನ್ನು ದಿ:04/01/2019 ರಂದು ಸಂದರ್ಶಿಸಿ ಶಾಲೆಯ ಶೈಕ್ಷಣಿಕ ಹಾಗೂ ಭೌತಿಕ ವಿಷಯಗಳನ್ನು ಪರಿಶೀಲನೆ ಮಾಡಿದ್ದಾರೆ, ಉಲ್ಲೇಖ (1) ರ ಸರ್ಕಾರಿ ಅಧಿಸೂಚನೆ ಸಂಖ್ಯೆ:ಇಡಿ:11:ಎಂಪಿಎಸ್(2) ದಿ:14-09-2004 ರನ್ವಯ ಮಾನ್ಯತೆ ನವೀಕರಣ ನೀಡುವ ಪ್ರಾಧಿಕಾರಿ ವಲಯದ ಕ್ಷೇತ್ರ ಶಿಕ್ಷಣಾಧಿಕಾರಿಗಳು ಇರುತ್ತಾರೆ. ಈ ಶಾಲೆಯ 1 ನೇ ತರಗತಿಗೆ ಆಂಗ್ಲ ಮಾಧ್ಯಮ ಮಾನ್ಯತೆ ನವೀಕರಣವನ್ನು ಹಾಗೂ 2 ನೇ ತರಗತಿ ಪ್ರಾರಂಭಿಸಲು ಅನುಮತಿಯನ್ನು ಶಾಶ್ವತ ಅನುದಾನ ರಹಿತವಾಗಿ ಮನ್ನಣೆ ನೀಡುವ ಕುರಿತು ಸಲ್ಲಿಸಿದ ಪ್ರಸ್ತಾವಣೆಯನ್ನು ಪರಿಶೀಲಿಸಿ ಜೆ ಎ ಶಿಕ್ಷಣ ಸಂಸ್ಥೆಯ ಆಂಗ್ಲ ಮಾಧ್ಯಮ ಕಿರಿಯ ಪ್ರಾಥಮಿಕ ಶಾಲೆ ಅಥಣಿ ತಾ:-ಅಥಣಿ ಈ ಶಾಲೆಯ 1 ನೇ ತರಗತಿಗಳಿಗೆ ಆಂಗ್ಲ ಮಾಧ್ಯಮದಲ್ಲಿ ಮಾನ್ಯತೆ ನವೀಕರಣ ಒಂದೊಂದು ವಿಭಾಗಕ್ಕೆ ಮಾತ್ರ ಶಾಶ್ವತ ಅನುದಾನರಹಿತವಾಗಿ ಈ ಕೆಳಗಿನ ಷರತ್ತಿಗೆ/ಸೂಚನೆಗಳಿಗೆ ಒಳಪಟ್ಟು ಮಾನ್ಯತೆ ನವೀಕರಣ ನೀಡಲಾಗಿದೆ. ಹಾಗೂ 2 ನೇ ತರಗತಿ ಪ್ರಾರಂಭಿಸಲು ಅನುಮತಿಯನ್ನು ನೀಡಲಾಗಿದೆ.

| ಅ. ನಂ | ಶಾಲೆಯ ಹೆಸರು | ವರ್ಗ | ಮಾಧ್ಯಮ | ಶಾಶ್ವತ ಅನುದಾನ ರಹಿತವಾಗಿ ಮನ್ನಣೆ ನೀಡಿದ ವಿವರ |
|---|---|---|---|---|
| 1 | ಜೆ ಎ ಶಿಕ್ಷಣ ಸಂಸ್ಥೆಯ ಆಂಗ್ಲ ಮಾಧ್ಯಮ ಕಿರಿಯ ಪ್ರಾಥಮಿಕ ಶಾಲೆ ಅಥಣಿ ತಾ:-ಅಥಣಿ | 1 ನೇ ತರಗತಿ (ಪ್ರತಿ ತರಗತಿಗೆ ಒಂದು ವಿಭಾಗದಂತೆ) | ಆಂಗ್ಲ ಮಾಧ್ಯಮ | ಮಾನ್ಯತೆ ನವೀಕರಣ (1 ನೇ ತರಗತಿ ಒಂದೊಂದು ವಿಭಾಗಕ್ಕೆ) 2018-19 ನೇ ಸಾಲಿಗೆ ಮಾನ್ಯತೆ ನವೀಕರಣ ನೀಡಲಾಗಿದೆ. ಹಾಗೂ 2 ನೇ ತರಗತಿ ಪ್ರಾರಂಭಿಸಲು ಅನುಮತಿಯನ್ನು ನೀಡಲಾಗಿದೆ. |

ಷರತ್ತುಗಳು

1.ಕರ್ನಾಟಕ ಶಿಕ್ಷಣ ಮಸೋದೆ 1983(ಆಕ್ಟ-1 1995) ನಿಯಮಗಳಿಗೆ ಅನುಗುಣವಾಗಿ ಸುಸಜ್ಜಿತವಾದ ಕಟ್ಟಡ,ಆಟದ, ಮೈದಾನ ಪಾಠೋಪಕರಣ ಮತ್ತು ಪೀಠೋಪಕರಣ ಹಾಗೂ ಎಲ್ಲ ಮೂಲ ಭೂತಸೌಲಭ್ಯಗಳನ್ನು ಆಡಳಿತ ಮಂಡಳಿಯು ಶಾಲೆಗೆ ಪೂರೈಸತಕ್ಕದ್ದು.

2.ಆಡಳಿತ ಮಂಡಳಿಯವರು ಶಾಲೆಯ ವಿಧ್ಯಾರ್ಥಿ/ವಿಧ್ಯಾರ್ಥಿನಿಯರಿಗೆ ಕುಡಿಯುವ ನೀರು ಹಾಗೂ ನೀರಿನ ವ್ಯವಸ್ಥೆಯೊಂದಿಗೆ ಶೌಚಾಲಯ(ವಿದ್ಯಾರ್ಥಿನಿಯರಿಗೆ ಪ್ರತ್ಯೇಕವಾಗಿ) ವ್ಯವಸ್ಥೆಯನ್ನು ಕಡ್ಡಾಯವಾಗಿ ಪೂರೈಸತಕ್ಕದ್ದು.

3.ವಿದ್ಯಾರ್ಥಿಗಳ ಪಟದ ಹಾಗೂ ಹಾಜರಾತಿ ಸಂಖ್ಯೆಯನ್ನು ಗಮನಾರ್ಹವಾಗಿ ಹೆಚ್ಚಿಸತಕ್ಕದ್ದು.

4.ಶಾಲೆಯಲ್ಲಿ ಅರ್ಹ ಪದವಿದರ ಶಿಕ್ಷಕರನ್ನು ನೇಮಕಾತಿ ಮಾಡಿಕೊಳ್ಳುವದು. ಮತ್ತು ಇಲಾಖೆ ನಿಗದಿಪಡಿಸಿ ಶುಲ್ಕವನ್ನು ಮಾತ್ರ ವಿದ್ಯಾರ್ಥಿಗಳಿಂದ ಪಡೆಯುವುದು ಹಾಗೂ ಸದರಿ ವಿವರವನ್ನು ಸೂಚನಾ ಫಲಕದ ಮೇಲೆ ಪ್ರಚಾರ ಪಡಿಸುವುದು.

5.ಶಾಲೆಯ ಹಿಂದಿನ ಸಾಲದ ಲೆಕ್ಕ ಪತ್ರಗಳನ್ನು ನೋಂದಣಿ ಅಧಿಕಾರಿಗಳಿಂದ ತಪಾಸಣೆ ಮಾಡಿ ವರದಿ ನೀಡುವುದು.

6.ಯಾವ ಆಡಳಿತ ಮಂಡಳಿಗೆ ಶಾಲೆಯನ್ನು ನಡೆಸಲು ಅನುಮತಿ ನೀಡಲಾಗಿದೆಯೋ ಅದೇ ಆಡಳಿತ ಮಂಡಳಿವರು ಅದೇ ಸ್ಥಳದಲ್ಲಿ ಅದೇ ಹೆಸರಿನಿಂದ ಶಾಲೆಯನ್ನು ನಡೆಸತಕ್ಕದ್ದು, ಮತ್ತು ಯಾವುದೇ ಕಾರಣಕ್ಕೂ ಸರ್ಕಾರದ/ಇಲಾಖೆಯ ಅನುಮತಿ ಇಲ್ಲದೆ ಹಸ್ತಾಂತರಿಸಲು ಅವಕಾಶವಿರುವದಿಲ್ಲ.

7.ಸರ್ಕಾರದ ಆದೇಶ ಸಂಖ್ಯೆ:ಎಡಿ-16/ಪಿಬಿಸಿ/94 ದಿನಾಂಕ ಹಾಗೂ ಮಾನ್ಯ ಆಯುಕ್ತರು ಸಾ.ಶಿ.ಇಲಾಖೆ ಬೆಂಗಳೂರು ಇವರ ಸುತ್ತೋಲೆ ಸಂಖ್ಯೆ ಸಿ-7(7)ಇತರೆ/52/2002-03 ದಿ:12-2-2004 ರಂತೆ ಕನ್ನಡ ಅಥವಾ ಮಕ್ಕಳ ಮಾತೃಭಾಷೆ ಮಾಧ್ಯಮದಲ್ಲಿ ಶಾಲೆಯನ್ನು ನಡೆಸಿ ಭಾಷಾ ನೀತಿಯನ್ನು ಉಲ್ಲಂಘಿಸುತ್ತಿರುವುದು ಸರ್ಕಾರ/ಇಲಾಖೆಯ/ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಗಮನಕ್ಕೆ ಬಂದಲ್ಲಿ ನಿಯಮಗಳನ್ವಯ ಸದರಿ ಶಾಲೆಯ ನೋಂದಣಿ ರದ್ದುಪಡಿಸಲಾಗುವುದು.

9.ಇಲಾಖೆಯಿಂದ ನಿಗದಿಪಡಿಸಿದ ಪಠ್ಯಪುಸ್ತಕಗಳ ಪರೀಕ್ಷೆ ಕ್ರಮಗಳನ್ನು ತಪ್ಪದ್ದೇ ಅಳವಡಿಸತಕ್ಕದ್ದು.

10.ಶಾಲಾ ಕೆಲಸದ ವೇಳೆ ಮತ್ತು ದಿನಗಳನ್ನು ಇಲಾಖೆ ನಿಯಮಗಳಂತೆ ಪಾಲಿಸತಕ್ಕದ್ದು.

11. ಸಿಬ್ಬಂದಿ ಸೇವಾ ವಿವರಗಳ ಬಗ್ಗೆ ಸರಕಾರದ ಅಧಿಸೂಚನೆ ಸಂ:ಎಸ್.ಇ.ಪಿ.ಎಸ್ 2005 ದಿ:12-1-2006 ರಲ್ಲಿಯ ನಿರ್ದೇಶನಗಳನ್ನು ಚಾಚೂ ತಪ್ಪದೇ ಪಾಲಿಸತಕ್ಕದ್ದು.

12.ಶಾಲೆಯಲ್ಲಿ ನೇಮಕ ಮಾಡಿಕೊಂಡ ಸಿಬಂದಿಗಳಿಗೆ ಸರಕಾರದ ನಿಯಮದಂತೆ ಕನಿಷ್ಠ ವೇತನವನ್ನು ಪಾವತಿಸಿ ಈ ಕಚೇರಿಗೆ ವರದಿ ಮಾಡತಕ್ಕದ್ದು.

13.ಶಾಲೆಯಲ್ಲಿ ಆರ್.ಟಿ.ಇ.ನಿಯಮದಂತೆ ವಿದ್ಯಾರ್ಥಿಗಳ ದಾಖಲಾತಿಯನ್ನು ನಿಗದಿತ ಅವಧಿಯೊಳಗೆ ಮಾಡತಕ್ಕದ್ದು.

14.ಹೆಚ್ಚಿನ ವರ್ಗಗಳನ್ನು ಹಾಗೂ ವಿಭಾಗಗಳನ್ನು ಇಲಾಖೆ ಪೂರ್ವಾನುಮತಿ ಇಲ್ಲದೆ ತೆರೆಯತಕ್ಕದಲ್ಲ.

15.ಕಾಲಕಾಲಕ್ಕೆ ಇಲಾಖೆಯಿಂದ ಮಾನ್ಯತೆಯನ್ನು ನವೀಕರಿಸಿ ಕೊಳ್ಳತಕ್ಕದ್ದು.

16.ಶಾಲೆಯ ವಾರ್ಷಿಕ ತಪಾಸಣೆಯನ್ನು ಪ್ರತಿ ವರ್ಷ ತಪ್ಪದೆ ಮಾಡಿಕೊಳ್ಳತಕ್ಕದ್ದು ಮತ್ತು ಅದರಂತೆ ಪಾಲನಾ ವರದಿಯನ್ನು ಒಪ್ಪಿಸತಕ್ಕದ್ದು.

17.ಶಾಲೆಯು ಪ್ರತಿ ವರ್ಷ ಆಯಾ ಸಾಲಿನ ಲೆಕ್ಕ ಪತ್ರಗಳನ್ನು ಸಂಬಂಧಿಸಿದ (ಅಡಿಟ್)ಪ್ರಾಧಿಕಾರದಿಂದ ಪರಿಶೀಲಿಸಿಕೊಳ್ಳತಕ್ಕದ್ದು. ಈ ಕಚೇರಿಗೆ ವರದಿ ನೀಡುವುದು.

18.ಕಾಲಾನುಸಾರ ಬದಲಾವಣೆಯಾಗುತ್ತಿರುವ ಕರ್ನಾಟಕ ಶಿಕ್ಷಣ ಮಸೋದೆ 1983(3) ನಿಯಮಗಳನ್ನು ಕಟ್ಟುನಿಟ್ಟಾಗಿ ಆಡಳಿತ ಮಂಡಳಿಯವರು ಪಾಲಿಸತಕ್ಕದ್ದು.

19.ಕರ್ನಾಟಕ ಸಮಗ್ರ ಶಿಕ್ಷಣ ಮಸೂದೆ 1983 ಕರ್ನಾಟಕ ಆಕ್ಕ 1995 ರಡ್ಡಿಯಲ್ಲಿ ಬರುವ ಕಾಯ್ದೆಗಳನ್ನು ಹಾಗೂ ರಚಿಸಲಾದ ನಿಯಮಗಳ ಸಂಬಂದದಡಿಯಲ್ಲಿ ಮತ್ತು ಪ್ರಾಧಿಕಾರ ನೀಡುವ ಎಲ್ಲ-ಶರತ್ತುಗಳನ್ನು ಹಾಗೂ ಆದೇಶಗಳನ್ನು ಕಟ್ಟುನಿಟ್ಟಾಗಿ ಪಾಲಿಸುವದು.

20.ಶಾಲೆಯಲ್ಲಿ ನೇಮಕ ಮಾಡಿಕೊಳ್ಳುವ ಪ್ರತಿಯೊಬ್ಬ ಭೋದಕ/ಭೋದಕೇತರ ಸಿಬ್ಬಂದಿಗೂ ಕರ್ನಾಟಕ ನಾಗರೀಕ ಸೇವಾ ಪುಸ್ತಕ ತೆಗೆದು ಅದರಲ್ಲಿ ವಿವರಗಳನ್ನು ದಾಖಲಿಸತಕ್ಕದ್ದು.

21.ಸ್ಥಿರನಿಧಿಯನ್ನು ಸಂಸ್ಥೆಯ ಅಧ್ಯಕ್ಷರು ಹಾಗೂ ಕ್ಷೇತ್ರ ಶಿಕ್ಷಣಾಧಿಕಾರಿಗಳು ಇವರ ಜಂಟಿ ಖಾತೆಯಲ್ಲಿ ನಿರ್ವಹಿಸುವುದು.

22.ಶಾಲೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಶಿಕ್ಷಕರ ಸೇವಾ ಪುಸ್ತಕವನ್ನು ಕಡ್ಡಾಯವಾಗಿ ನಿರ್ವಹಿಸಿ ಬ್ಯಾಂಕ ಮೂಲಕ ಕನಿಷ್ಠ ವೇತನವನ್ನು ನೀಡತಕ್ಕದ್ದು.(ಸೇವಾ ಭದ್ರತೆ ನಿಯಮಗಳನ್ನು...ಕಟ್ಟುನಿಟ್ಟಾಗಿ ಪಾಲಿಸತಕ್ಕದ್ದು.) ಮತ್ತು *ಶಿಕ್ಷಕರಿಗೆ ನೇಮಕಾತಿ ಆದೇಶ ಪ್ರತಿ ನೀಡುವ ಕರಾರಿಗೆ ಈ ಆದೇಶ ಒಳಪಟ್ಟಿದೆ*

23.ಪ್ರತಿ ವರ್ಷ ಆರ್.ಟಿ.ಇ. ನಿಯಮದಂತೆ ವಿದ್ಯಾರ್ಥಿಗಳ ದಾಖಲಾತಿಯನ್ನು ನಿಗದಿತ ಅವಧಿಯಲ್ಲಿ ಪೂರೈಸತಕ್ಕದ್ದು.

24.ಇಲಾಖೆಯಿಂದ ಮಾನ್ಯತೆಯನ್ನು ನಿಗಧಿತ ಅವಧಿಯಲ್ಲಿ ಪಡೆಯತಕ್ಕದ್ದು.

25. ಶಾಲೆಗೆ ಸ್ವಂತ ಕಟ್ಟಡವನ್ನು ತ್ವರಿತವಾಗಿ ನಿರ್ಮಿಸತಕ್ಕದ್ದು.

26.ಮುಂದಿನ 6 ತಿಂಗಳೊಳಗಾಗಿ 2.00 ಲಕ್ಷ ರೂಪಾಯಿ ಶಾಲಾ ಸ್ಥಿರ ನಿಧಿ ಇಡತಕ್ಕದ್ದು ಹಾಗೂ ದಿ:02-01-2018 ರಂದು ಪ್ರಕಟವಾದ ಕರ್ನಾಟಕ ರಾಜ್ಯ ಪತ್ರದ ಅಧಿಸೂಚನೆಯ ಕರಡು ನಿಯಮಗಳನ್ವಯ ಸೂಚನೆಗಳನ್ನು ಪಾಲಿಸಿ ಅನುಷ್ಠಾನಗೊಳಿಸುವುದು. ಇಲ್ಲಿದಿದ್ದಲ್ಲಿ ಈ ಆದೇಶ ತನ್ನಿಂತ ತಾನೇ 1-7 ತರಗತಿ ಮಾನ್ಯತೆ ರದ್ದಾಗುವ ಷರತ್ತಿಗೊಳಪಟ್ಟಿರುತ್ತದೆ.

**ಸೂಚನೆಗಳು:**

1.ಮೇಲಿನ ಶರತ್ತು ಸಂಖ್ಯೆ 1ರಲ್ಲಿ ತಿಳಿಸಿದಂತೆ ಶಾಲಾ ಕಟ್ಟಡದ ಸುರಕ್ಷತೆಯ ಬಗ್ಗೆ ಪ್ರಮಾಣ ಪತ್ರವನ್ನು ಕಡ್ಡಾಯವಾಗಿ ಪ್ರತಿ ವರ್ಷ ಸಲ್ಲಿಸಬೇಕಾಗುತ್ತದೆ.

2.ಮೇಲಿನ ಶರತ್ತುದಲ್ಲಿ ತಿಳಿಸಿದಂತೆ ಶಾಲಾ ವಿದ್ಯಾರ್ಥಿಗಳ ದಾಖಲಾತಿ ವಿವರವನ್ನು ಪ್ರತಿ ವರ್ಷ ಕಡ್ಡಾಯವಾಗಿ ನೀಡುವುದು. ಸದರ ಪ್ರತಿಯನ್ನು ಸಲ್ಲಿಸುವುದು.

3.ಶಾಲೆಯನ್ನು ಇಲಾಖೆಯಿಂದ ನೊಂದಣಿ ಮಾಡಿಕೊಳ್ಳುವ ಶರತ್ತಿಗೊಳಪಟ್ಟು ನವೀಕರಿಸಿದೆ.

4.ಶಾಲೆಗೆ ಅಗ್ನಿ ಶಾಮಕ ನಿಂದಕ ಕೂಡಲೇ ಖರೀದಿಸುವುದು.

5.ವಿದ್ಯಾರ್ಥಿಗಳ ದಾಖಲಾತಿ ಹಾಜರಾತಿ ನಿಗದಿಪಡಿಸಿದ ಸಂಖ್ಯಾಬಲವನ್ನು ಹೊಂದಿಕೊಳ್ಳತಕ್ಕದ್ದು ಇಲ್ಲದೇಹೋದಲ್ಲಿ ಈಗ ನೀಡಿದ ಮಾನ್ಯತೆಯು ತನ್ನಿಂದ ತಾನೇ ರದ್ದಾಗುವುದು.

ಮೇಲಿನ ಸೂಚನೆಗಳನ್ನು ಪಾಲಿಸಿ ಕಡ್ಡಾಯವಾಗಿ ಸಂಬಂಧಿಸಿದ ದಾಖಲೆಗಳನ್ನು ಹಾಗೂ ಪಾಲನಾ ವರದಿಯನ್ನು 2 ತಿಂಗಳ ಒಳಗಾಗಿ ಸಲ್ಲಿಸದೇ ಇದ್ದಲ್ಲಿ ಮಾನ್ಯತೆ ನವೀಕಣಕರಿಸಿದ ಆದೇಶವು ಆದೇಶದ ದಿನಾಂಕದಿಂದ ರದ್ದಾಗುವದೆಂದು ತಿಳಿಸಲಾಗಿದೆ.

ಕ್ಷೇತ್ರ ಶಿಕ್ಷಣಾಧಿಕಾರಿಗಳು
ಅಥಣಿ

ಗೆ,
ಪ್ರಧಾನ ಗುರುಗಳು; ಜೆ ಎ ಶಿಕ್ಷಣ ಸಂಸ್ಥೆಯ ಅಂಗ್ಲ ಮಾಧ್ಯಮ ಕಿರಿಯ ಪ್ರಾಥಮಿಕ ಶಾಲೆ ಅಥಣಿ ತಾ:-ಅಥಣಿ

CHAIRMAN
J. E. Society
Athani. Dist: Belagavi

## REMINDER

Subject: JA Educational Institution English Medium Lower Primary School, Athani, regarding renewal of accreditation for Class 1 and permission to start Class 2 of this school.

Reference: 1) Government Notification No.: ED: 11: MPS(2) Date: 14-09-2004

2)President/Principal, J.A. Educational Institution, English Medium Lower Primary School Athani Tq. Athani proposal Date: 26/12/2018

3) Shri S. P. Sanadi, E.C.O, Shri N. M. Biradar E.C.O and Field Education Officers on 04/01/2019

4) Government Circular: ED113: VVITA: 2006 Date: 03/10/2018

5) Sakala GSC Number: **ED0990000463637**

In accordance with the above subject and reference, a proposal has been submitted to the English Medium Junior Primary School, Athani, T.A., of Ranvaya J.A. Educational Institution, for renewal of recognition for Class 1 and permission to start Class 2 for the year 2018-19. The said school is registered under the Education Act. The proposal submitted by the Headmaster of the said school for renewal of recognition for class 1 and for starting class 2 has been thoroughly examined in accordance with the Karnataka Education Act, 1999, as per the Recognition Rules. Shri S. P. Sanadi, E.C.O, Shri N. M. Biradar, E.C.O and the Field Education Officers visited the said school on 04/01/2019 and inspected the academic and physical aspects of the school. The authority to renew the recognition as per Government Notification No. ED:11:MPS(2), dated 14-09-2004 of Reference (1) is the Field Education Officer of the zone. For class | of this school. Please review the proposal submitted regarding the renewal of English medium recognition and permission to start Class 2 on a permanent unaided basis. JA Educational Institution English Medium Junior Primary School, Athani, Ta:-Athani The renewal of recognition in English medium for Classes 1 of this school has been granted on a permanent unaided basis subject to the following conditions/instructions. And permission to start Class 2 has been granted.

| Sl No. | School Name | Standard | Medium | Details of permanent unfunded recognition |
|---|---|---|---|---|
| 1 | J E Education Society English Medium lower primary School Athani, Tq. Athani | 1st standard (one for each grade as per section) | English Medium | Renewal of accreditation (1st grade for each section) the renewal of accreditation has been granted for the year 2018-19. And permission has been granted to start the 2nd class. |

**Condition :**

1. The Governing Body shall provide the school with a well-equipped building, playground, teaching aids and furniture and all basic amenities as per the provisions of the Karnataka Education Act 1983 (Act-1 1995).
2. The governing body shall mandatorily provide drinking water and toilet facilities (separately for female students) for the male and female students of the school.
3. The number of students and their attendance shall be significantly increased.
4. To appoint qualified teachers in the school and to collect only the fees fixed by the department from the students and to publicize the said details on the notice board.
5. The school's previous loan accounts should be checked by the registration officers and a report should be submitted.
6. The same governing body to which permission has been given to run the school shall run the school at the same location and under the same name, and no transfer is allowed without the permission of the Government/Department for any reason.
7. Government Order No.: AD-16/PBC/94 dated and Hon'ble Commissioner, S.S. Department, Bangalore, vide circular No. C-7(7)Miscellaneous/52/2002-03 dated: 12-2-2004, if it comes to the notice of the Government/Department/Kannada Development Authority that a school is being run in Kannada or the mother tongue of the children in violation of the language policy, the registration of the said school will be cancelled as per the rules.

NOTARY GOVT. OF INDIA

8. Medical check-ups of students should be conducted every year as per the rules.
9. The textbook testing procedures set by the department must be implemented without fail
10. School work and days must be followed as per department rules,
11. The directions contained in the Government Notification No. SEPS 2005 dated 12-1-2006 regarding the details of staff service shall be strictly followed.
12. The minimum wage as per government rules should be paid to the staff employed in the school and reported to this office.
13. Enrollment of students in schools should be done within the prescribed period as per the RTE rules.
14. Additional classes and sections should not be removed without prior permission from the department.
15. The accreditation shall be renewed by the department from time to time.
16. An annual inspection of the school shall be conducted every year without fail and a maintenance report shall be submitted accordingly.
17. The school shall have its accounts for the respective year audited by the relevant (audit) authority every year. A report shall be submitted to this office.
18. The Governing Body shall strictly follow the rules of the Karnataka Education Act 1983(3), which are changing from time to time.
19. To strictly comply with the provisions of the Karnataka Comprehensive Education Bill 1983 and the Karnataka Act 1995 and the rules made there under and all the conditions and orders issued by the Authority.
20. A Karnataka Civil Service Book should be issued to every teaching/non-teaching staff appointed in the school and details should be recorded in it.
21. The fixed fund shall be managed in a joint account by the President of the institution and the Field Education Officer.
22. It is mandatory to maintain the service book of the teachers working in the school.
Minimum salary shall be paid through bank. (Service security rules shall be strictly followed.) And this order is subject to the agreement to issue a copy of the appointment order to teachers.
23. Every year, the registration of students as per the RTE rules should be completed within the stipulated period.
24. Recognition from the department should be obtained within the prescribed period.
25. The school should quickly construct its own building.
26. A school fixed fund of Rs. 2.00 lakhs shall be maintained within the next 6 months and the instructions as per the draft rules of the Karnataka Gazette notification published on 02-01-2018 shall be followed and implemented. In this case, this order shall automatically be subject to cancellation of recognition of classes 1-7.

**Instructions:**

1. As mentioned in condition number 1 above, a certificate regarding the safety of the school building must be submitted every year.
2. It is mandatory to provide the enrollment details of school students every year as mentioned in the above condition. A copy of the document must be submitted.
3. The school has been renewed subject to registration with the department.
4. Immediately purchase a fire extinguisher for the school.
5. The enrolment and attendance of students shall be adjusted to the prescribed strength, failing which the recognition granted now shall automatically be cancelled.

It has been informed that if the relevant documents and compliance report are not submitted within 2 months after following the above instructions, the order for renewal of accreditation will be cancelled from the date of the order.

Sd/-
Block Education Officer
Athani

To,
Headmaster, J E Educational Institution, J E lower primary English Medium School Athani Tq: Athani

Head Mistress
Shri Pratap Jadhavji Bhate
English Medium School
Athani-591304

Verified & found correct

NOTARY
Advocate & Notary
Athani, Belagavi
Reg.No: 4209
GOVT. OF INDIA

S. V. Chougala
Notary Govt. of India
ATHANI. Dist: Belagavi.

SECRETARY
J E Society
Athani-591304. Dist:Belagavi